ಕನ್ನಡಿಯಲ್ಲಿ ತನ್ನ ಪಕ್ಕದ ಕುರ್ಚಿಯಲ್ಲಿ ಪ್ರೊಫೆಸರ್ ಕಾಳಪ್ಪ ಕುಳಿತಿರುವುದು ಗೋಚರಿಸಿ ಪ್ರೇಮಚಂದ ಮುಗುಳುನಕ್ಕ. ಕಾಳಪ್ಪನವರ ಮುಖದ ತುಂಬೆಲ್ಲ ಚಿತ್ರವಿಚಿತ್ರವಾದ ಕಾಗದಗಳನ್ನು ಅಂಟಿಸಿದ್ದರಿಂದ ಪ್ರೇಮಚಂದ ತಮ್ಮನ್ನು ನೋಡಿ ಮುಗುಳುನಕ್ಕಿದ್ದು ಅವರ ಗಮನಕ್ಕೆ ಬರಲಿಲ್ಲ.

ಮೂರು ಗಂಟೆಗಳ ಸತತ ಪ್ರಯತ್ನದ ಅನಂತರವೂ ಪ್ರೇಮಚಂದನ ಮುಖದಲ್ಲಿ ಹೊಸ ಚಹರೆಯನ್ನು ರೂಪಿಸಲು ಪರಿಣತರು ವಿಫಲರಾದರು. ಅಚ್ಚರಿಯ ಸಂಗತಿ ಎಂದರೆ, ಪ್ರೊಫೆಸರ್ ಕಾಳಪ್ಪನವರ ಮುಖದಲ್ಲಿ ಹೊಸಚಹರೆಯೊಂದು ಆವಿರ್ಭವಿಸಿ ಅವರು ಹೊಸ ವ್ಯಕ್ತಿಯಾಗಿ ಕಾಣಿಸತೊಡಗಿದರು. ಪ್ರೇಮಚಂದನಿಗೆ ಎಲ್ಲವೂ ಅಯೋಮಯವೆನಿಸಿತು. ಅಂಗಡಿಯ ಮುಖ್ಯಸ್ಥ ಪ್ರೇಮಚಂದನನ್ನು ತನ್ನ ಚೇಂಬರಿಗೆ ಕರೆದೊಯ್ದು ಹೇಳಿದ, 'ನಿಮ್ಮಲ್ಲಿ ಯಾವ ಪ್ರಲೋಭನೆಗಳೂ ಇದ್ದಂತೆ ತೋರುತ್ತಿಲ್ಲ. ವೈರಾಗ್ಯವೇ ನಿಮ್ಮ ಮೈ ಮತ್ತು ಮನಸ್ಸನ್ನು ಆವರಿಸಿಕೊಂಡಿರಬಹುದು. ಈ ಕಾರಣದಿಂದ ನಿಮ್ಮ ಮುಖದಲ್ಲಿ ಹೊಸ ಚಹರೆಯನ್ನು ರೂಪಿಸಲು ನಮಗೆ ಸಾಧ್ಯವಾಗುತ್ತಿಲ್ಲ. ಅದೇ ಪ್ರೊಫೆಸರ್ ಕಾಳಪ್ಪ ಅವರನ್ನು ನೋಡಿ. ಮುಖದ ಸ್ನಾಯುಗಳು ಸಡಿಲುಗೊಂಡು ಚರ್ಮ ಸುಕ್ಕುಗಟ್ಟಿ ಜೊತು ಬಿದ್ದಿದ್ದರೂ ಅವರ ಮುಖದಲ್ಲಿ ಹೊಸ ಚಹರೆ ರೂಪಿಸಲು ಸಾಧ್ಯವಾಯಿತು. ಇದರರ್ಥ ಈ ಇಳಿ ವಯಸ್ಸಿನಲ್ಲೂ ಅವರಲ್ಲಿ ಬತ್ತದ ಮಹತ್ವಾಕಾಂಕ್ಷೆ ಇದೆ, ಪ್ರಶಸ್ತಿ ಗೌರವಗಳ ವಾಂಛೆ ಇದೆ, ಬೇರೆಯವರನ್ನು ತುಳಿದಾದರೂ ಸರಿ ತಾನು ಬೆಳೆಯಬೇಕೆಂಬ ಹಂಬಲವಿದೆ ಎಂದು. ಈ ಗುಣಗಳಿಂದಾಗಿ ಅವರ ಮುಖದಲ್ಲಿ ಹೊಸ ಚಹರೆ ಹುಟ್ಟಲು ಕೇವಲ ಅರ್ಧಗಂಟೆ ಸಾಕಾಯಿತು'.

★★★

ಉಪಸಂಹಾರ: ಸಂದರ್ಶನ ಸಮಿತಿಯು ಪತ್ರದಲ್ಲಿ ಉಲ್ಲೇಖಿಸಿದ ಸಂಗತಿಗಳನ್ನು ಸಾಬೀತು ಪಡಿಸಲು ವಿಫಲನಾದ ಹಿನ್ನೆಲೆಯಲ್ಲಿ ಕಂಪನಿಯು ಪ್ರೇಮಚಂದನನ್ನು ನೌಕರಿಯಿಂದ ವಜಾಗೊಳಿಸಿದೆ. ಮಠವೊಂದರ ಆಡಳಿತ ಮಂಡಳಿಯು ಜಾತಿಯ ಹೆಸರನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಕೋರ್ಟಿನಲ್ಲಿ ದಾವೆ ಹೂಡಿದೆ. ಸರಳಾಬಾಯಿಯ ಆತಂಕ ದಿನೇದಿನೇ ಹೆಚ್ಚುತ್ತಿದ್ದು ಗಂಡನ ಮುಖದಲ್ಲಿ ಹೊಸ ಚಹರೆ ಆವಿರ್ಭವಿಸುವ ಕ್ಷಣಕ್ಕಾಗಿ ಕಾತುರದಿಂದ ಕಾದುಕುಳಿತಿದ್ದಾಳೆ. ಈ ನಡುವೆ ಶೇಷಗಿರಿ ಪುರೋಹಿತನ ಸಲಹೆಯಂತೆ ಸರಳಾಬಾಯಿ ಗಂಡನ ಹೆಸರನ್ನು ಬದಲಿಸುವ, ಸಾಧ್ಯವಾದರೆ ಮುಖದಲ್ಲಿ ಕೃತಕ ಚಹರೆ ಸೃಷ್ಟಿಸಲು ಶಸ್ತ್ರಚಿಕಿತ್ಸೆ ಮಾಡಿಸುವ ಹವಣಿಕೆಯಲ್ಲಿರುವಳು. ಈ ಎಲ್ಲ ಆತಂಕ, ಗೊಂದಲಗಳ ನಡುವೆಯೂ ಪ್ರೇಮಚಂದ ಹೊಸ ನೌಕರಿ ಹುಡುಕುತ್ತ ಓದು ಬರಹದಲ್ಲಿ ತೊಡಗಿಸಿಕೊಂಡು ನೆಮ್ಮದಿಯಿಂದಿರುವನು.


## ರಾಜಕುಮಾರ ಕುಲಕರ್ಣಿ

ಕಲಬುರಗಿ ತಾಲ್ಲೂಕಿನ ಕುಮಸಿಯವರು. ಗುಲಬರ್ಗಾ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ. ಪ್ರಸ್ತುತ ಬಾಗಲಕೋಟೆಯ ಬಿ.ವಿ.ವಿ. ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕ. 'ಪೂರ್ಣ ಸತ್ಯ', 'ಮನದ ಮಾತು', 'ಅನಾವರಣ', 'ಅನ್ವೇಷಣೆ', 'ಬೊಗಸೆಯಲ್ಲಿ ಕಡಲು', 'ಭಾವಭಿತ್ತಿ', 'ಹೆಜ್ಜೆ ಮೂಡಿದ ಹಾದಿ' ಎನ್ನುವ ಲೇಖನಗಳ ಸಂಕಲನಗಳು ಮತ್ತು 'ಬೇರಿಗಂಟಿದ ಮರ' ಕಥಾಸಂಕಲನ ಪ್ರಕಟವಾಗಿವೆ.